ಸರ್ಕಾರಿ ಆದೇಶ ಸಂಖ್ಯೆ: ಆಕುಕ 28 ಎಸ್‌ಬಿವಿ 95 ದಿನಾಂಕ 22-6-98ರಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಆಯಾ ಆಸ್ಪತ್ರೆಯ ದರ್ಜೆಗೆ ಅನುಗುಣವಾಗಿ ಸದಸ್ಯರುಗಳನ್ನು ಒಳಗೊಂಡಂತೆ ಸಂದರ್ಶಕರ ಸಮಿತಿಯನ್ನು ರಚಿಸಲು ಮಾರ್ಗ ಸೂಚಿಯನ್ನು ಹೊರಡಿಸಲಾಗಿದೆ.

೧. ಸಂದರ್ಶಕ ಸಮಿತಿಯು ಈ ಕೆಳಗೆ ಕಾಣಿಸಿದ ಕರ್ತವ್ಯಗಳನ್ನು ನಿರ್ವಹಿಸಬೇಕು:

1. ಸಂಬಂಧಪಟ್ಟ ಆರೋಗ್ಯ ಸಂಸ್ಥೆಗಳಿಗೆ ತಿಂಗಳಿನಲ್ಲಿ ಒಂದು ಸಲವಾದರೂ ಬೇಟಿ ನೀಡುವುದು.

2. ಸಂಸ್ಥೆಯಲ್ಲಿ ವೈದ್ಯಕೀಯ ಉಪಾಚಾರಗಳು ಸಮರ್ಪಕವಾಗಿದೆಯೇ ಎಂಬುದನ್ನು ಹಾಗೂ ಔಷಧ ಸಂಗ್ರಹ ಸಾಕಷ್ಟು ಪ್ರಮಾಣದಲ್ಲಿವೆಯೋ ಎಂಬುದನ್ನು ಪರಿಶೀಲಿಸುವುದು.

3. ಸಂಸ್ಥೆಯ ಕಾರ್ಯನಿರ್ವಹಣೆಯ ಬಗ್ಗೆ ವೈದ್ಯರ ಹಾಗೂ ಪೂರಕ ಸಿಬ್ಬಂದಿಗಳ ಹಾಜರಾತಿಯೊಡನೆ ವೈದ್ಯರ ಸೇವೆಗಳ ಬಗ್ಗೆ ಪರಿಶೀಲಿಸುವುದು.

4. ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ರೋಗಿಗಳಿಗೆ ಒದಗಿಸಿರುವ ಸೌಲಭ್ಯಗಳು ಸಂಸ್ಥೆಯ ಜನಪ್ರಿಯತೆ, ಸಾಕಷ್ಟು ಸೌಲಭ್ಯಗಳು ಲಭ್ಯವಿರುವ ಬಗ್ಗೆ ಜನ ಸಾಮಾನ್ಯರ ದೂರುಗಳನ್ನು ಪರಿಶೀಲಿಸಲು ಮತ್ತು ಆಸ್ಪತ್ರೆ ಸಿಬ್ಬಂದಿಯ ವಿರುದ್ಧ ಸಾರ್ವಜನಿಕರಿಂದ ದೂರುಗಳಿದ್ದಲ್ಲಿ ಅವುಗಳನ್ನು ವಿಚಾರಿಸುವುದು ಮತ್ತು ಆಸ್ಪತ್ರೆಯ ವೈದ್ಯರುಗಳ ಸಾರ್ವಜನಿಕ ಸಂಪರ್ಕದ ಬಗ್ಗೆ ಸೂಕ್ತ ಕ್ರಮಕ್ಕಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರಿಗೆ ಹಾಗೂ ಸರ್ಕಾರಕ್ಕೆ ವರದಿಯನ್ನು ಕಳುಹಿಸುವುದು.

5. ಸಂಸ್ಥೆಯ ಸಾಮಾನ್ಯ ನಿರ್ವಹಣೆಯನ್ನು ಪರಿಶೀಲಿಸುವುದು ಮತ್ತು ಉನ್ನತ ಸಭ್ಯತೆಯನ್ನು ಕಾಪಾಡಿಕೊಳ್ಳಲು ಮತ್ತು ಆಸ್ಪತ್ರೆಯ ನಿರ್ವಹಣೆಯ ಬಗ್ಗೆ ವೈದ್ಯಾಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡುವುದು.

6. ಸಂಸ್ಥೆಯ ಅಭ್ಯುದ್ದಿಗಾಗಿ ದಾನಶೀಲತೆಯನ್ನು ಪ್ರೋತ್ಸಾಹಿಸುವುದು.

ಭಾಲ್ಕಿ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರಾರಂಭ

179 (1398)- ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಭಾಲ್ಕಿ ಮತ ಕ್ಷೇತ್ರದಲ್ಲಿ ಈಗ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ. ಹೊಸದಾಗಿ ಯಾವ ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿವೆ, ಬಂದಿದ್ದರೆ, ಅವುಗಳನ್ನು ಪ್ರಾರಂಭಿಸಲು ಏನು ಕ್ರಮ ತಗೆದುಕೊಳ್ಳಲಾಗುವುದು?

ಇ. ಪ್ರಸ್ತಾವನೆಗಳಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಭಾಲ್ಕಿ ಮತಕ್ಷೇತ್ರದಲ್ಲಿ 7 ಪ್ರಾಥಮಿಕ ಆರೋಗ್ಯ ಕೇಂದ್ರಗಳಿರುತ್ತವೆ.

ಆ. ಲಖಿನಗಾಂವ ಪ್ರಾಥಮಿಕ ಆರೋಗ್ಯ ಘಟಕವು ಬಾತಂಬ್ರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುತ್ತಿದ್ದು, ಇದನ್ನು ಮೇಲ್ದರ್ಜೆಗೇರಿಸಿ, ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮಾಡುವ ಪ್ರಸ್ತಾವನೆಯು ಮಂಜೂರಾತಿಗಾಗಿ ನಿರ್ದೇಶಕರ ಕಛೇರಿಯಲ್ಲಿ ಸ್ವೀಕೃತವಾಗಿರುತ್ತದೆ. ಈ ಪ್ರಸ್ತಾವನೆಯನ್ನು ಮಾರ್ಗಸೂಚಿಗನುಗುಣವಾಗಿ ಪರಿಶೀಲಿಸಲಾಗುವುದು.

ಇ. ಈ ಹಂತದಲ್ಲಿ ಹೇಳಲು ಸಾಧ್ಯವಿಲ್ಲ.

ಲಿಂಗಸಗೂರು ತಾಲ್ಲೂಕಿನ ಮಸ್ಕಿ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ

180 (553)- ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಲಿಂಗಸಗೂರು ತಾಲ್ಲೂಕಿನ ಮಸ್ಕಿ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ತೆಗೆದುಕೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೆ?

ಆ. ಹಾಗಿದ್ದಲ್ಲಿ, ಸದರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಿ, ಯಾವಾಗ ಮುಕ್ತಾಯಗೊಳಿಸಲಾಗುವುದು ?

ಇ. ಸದರಿ ಯೋಜನೆಯು ಸಧ್ಯ ಯಾವ ಹಂತದಲ್ಲಿದೆ; ಹಾಗೂ ಈ ಯೋಜನೆಗೆ ತಗಲಬಹುದಾದ ಒಟ್ಟು ಅಂದಾಜು ಮೊತ್ತವೆಷ್ಟು?

ಈ. ಕುಡಿಯುವ ನೀರಿನ ಯೋಜನೆಯನ್ನು ಯಾವ ಯೋಜನೆಯ ಮೂಲಕ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ?

ಶ್ರೀ ಕೆ.ಬಿ.ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ. ಹೌದು

ಆ. ಈ ಯೋಜನೆಯು ಆಡಳಿತಾತ್ಮಕವಾಗಿ ಇನ್ನೂ ಮಂಜೂರಾಗಿರುವುದಿಲ್ಲ.

ಇ. ಯೋಜನೆಯ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಪರಿಕಲ್ಪಿತ ರಿನ್ಯಾಸ ವರದಿಯ ಪ್ರಕಾರ ಯೋಜನೆಯ ಅಂದಾಜು ಮೊತ್ತ ಸುಮಾರು ರೂ. 5.85 ಕೋಟಿಗಳು.

ಈ. ಈ ಕುರಿತು ಇನ್ನೂ ತೀರ್ಮಾನಿಸಿರುವುದಿಲ್ಲ.

ಶಾಸಕರ ಪ್ರದೇಶಾಭಿವೃದ್ಧಿ ನಿಧಿ

4 (43)- ಶ್ರೀಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಯೋಜನ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2001-02ನೇ ಸಾಲಿಗೆ ರಾಜ್ಯದ ಶಾಸಕರ ಪ್ರದೇಶಾಭಿವೃದ್ಧಿ ನಿಧಿಗೆ ನಿಗದಿಪಡಿಸಿದ ಹಣ ಎಷ್ಟು?

ಆ. ಇದರಲ್ಲಿ ಇದುವರೆಗೆ ಬಿಡುಗಡೆ ಮಾಡಿರುವ ಹಣ ಎಷ್ಟು ?

ಇ. ಪೂರ್ಣ ಹಣ ಬಿಡುಗಡೆಯಾಗದಲ್ಲಿ ಕಾರಣವೇನು? ಯಾವಾಗ ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗುವುದು?